# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್.ಸಿ. 137/2020**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹದೇವು | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ನಡುಕೇರಿ ನಾಯಕ | | **15.01.2025** |
| **ವಯಸ್ಸು** | ಃ **43** ವರ್ಷ | | |
| **ವೃತ್ತಿ** | ಃ ಹಣ್ಣಿನ ವ್ಯಾಪಾರ | **ಪ್ರಾ.ಸಾ.** | ಃ **07** |
| **ವಾಸಸ್ಥಳ** | ಃ ಕಡಕೊಳ | **ಚಾ.ಸಾ.** | ಃ **08** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ–9 ಪ್ರಕಾಶ ನನ್ನ ಅಣ್ಣನಿರುತ್ತಾನೆ. ನಾನು ಹಳೇ ಕೋರ್ಟ್ ಕಾಪೌಂಡ್ ನ ಮುಂಭಾಗದಲ್ಲಿರುವ ಮನು ವನ ಪಾರ್ಕ್ ಬಳಿ 18 ವರ್ಷಗಳಿಂದ ಕಟ್ ಫ್ರೂಟ್ಸ್ ವ್ಯಾಪಾರ ಮಾಡುತ್ತೇನೆ. ನಾನು ದಿನಾಲೂ ಬೆಳಗ್ಗೆ10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಫ್ರೂಟ್ಸ್ ವ್ಯಾಪಾರ ಮಾಡುತ್ತೇನೆ. ಚಾಸಾ–9 ಪ್ರಕಾಶ್ ಸಹ ನನ್ನ ಪಕ್ಕದ ಅಂಗಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಾರೆ. ಕೋರ್ಟ್ ಮುಂದೆ ಇರುವ ಆರೋಪಿತ ರೆಹಮಾನ್ ಷರೀಫ್ ಸಹ ಅದೇ ಸ್ಥಳದಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಾನೆ. ಆರೋಪಿ ದಿನಾಲೂ ಸಂಜೆ ತನ್ನ ತಳ್ಳುವ ಗಾಡಿಯನ್ನು ಪಾರ್ಕ್ ಪಕ್ಕದಲ್ಲಿರುವ ಒಂದು ಮನೆ ಕಾಪೌಂಡ್ ಒಳಗಡೆ ನಿಲ್ಲಿಸಿ ಹೊಗುತ್ತಿದ್ದ. ಆ ಕಾಪೌಂಡ್ ಒಳಗಡೆ ಇದ್ದ ಮನೆಯವರು ಸಹ ನನಗೆ ಪರಿಚಯ ಇದ್ದಾರೆ. ದಿಃ20.08.2019 ರಂದು ಆ ಕಾಪೌಂಡ್ ಒಳಗಡೆ ಇದ್ದ ಮನೆಯಲ್ಲಿ ಕಳ್ಳತನವಾಗಿದೆ ಎಂದು ಪೊಲೀಸರು ಹೇಳಿದಾಗ

ಗೊತ್ತಾಗಿತ್ತು. ಆ ಮನೆಯವರ ಹೆಸರು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆ ಕಾಲಕ್ಕೆ ಆರೋಪಿ ರೆಹಮಾನ್ ಷರೀಫ್ ಕಳ್ಳತನ ಮಾಡಿದ್ದಾರೆ ಎಂದು ಹೇಳಿದ್ದರು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*21.08.2019* ರಂದು ಬೆಳಗ್ಗೆ *7.30* ಕ್ಕೆ ಆರೋಪಿತ ನಾಗರತ್ನ ಇವರು ಮನೆಯಲ್ಲಿ ಒಬ್ಬರೇ ಇದ್ದಾಗ ಮನೆಯ ಒಳಗಡೆ ನುಗ್ಗಿ ಅವರ ಬಾಯಿಗೆ ಬಟ್ಟೆ ತುರುಕಿ ಅವರ ಕೈಯಲ್ಲಿದ್ದ *7* ಚಿನ್ನದ ಬಳೆಗಳನ್ನು ಕಿತ್ತುಕೊಂಡು ಹೋದ ಬಗ್ಗೆ ನನಗೆ ಗೊತ್ತಾಗಿತ್ತು ಮತ್ತು ಆ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಕೆ.ಎಂ ರವರಿಂದಃ-**

*3.* ದಿಃ*20.08.2019* ರಂದೇ ಆ ಘಟನೆ ನಡೆದಿದೆ. ಆ ದಿನವೂ ಸಹ ನಾನು ಬೆಳಗ್ಗೆ *10* ಗಂಟೆಗೆ ನನ್ನ ಅಂಗಡಿ ಪ್ರಾರಂಭಿಸಿದ್ದೆ. ಆ ಮನೆಯಲ್ಲಿ ನಾಗರತ್ನ ಒಬ್ಬರೇ ಇರುತ್ತಿದ್ದರು. ಘಟನೆ ನಡೆದಾಗಲೂ ಅವರು ಒಬ್ಬರೇ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಘಟನೆ ದಿನ ನಾನು ಅವರ ಮನೆ ಬಳಿ ಹೋಗಿರಲಿಲ್ಲ. ಆ ಘಟನೆ ದಿನವೇ ನನ್ನ ಅಂಗಡಿ ಬಳಿಯೇ ಪೊಲೀಸರು ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆ ಕಾಲಕ್ಕೆ ನಾನು ಅಲ್ಲಿಯೇ ಸಹಿ ಮಾಡಿದ್ದೆ. ಅದನ್ನು ಟೈಪ್ ಮಾಡಿದ್ದರೋ ಅಥವಾ ಕೈ ಬರಹದಲ್ಲಿ ಬರೆದಿದ್ದರೋ ಗೊತ್ತಿಲ್ಲ. ಪೊಲೀಸರು ಹೇಳಿದ್ದನ್ನೆ

ಘಟನೆ ಬಗ್ಗೆ ಹೇಳಿದ್ದೇನೇ ಎಂದರೆ ನಿಜ. ನಾನು ಘಟನೆ ನೋಡಿಲ್ಲ ಎಂದರೆ ನಿಜ. ನಾನು ವ್ಯಾಪಾರ ಮಾಡುವ ಸ್ಥಳಕ್ಕೆ ಬಾಡಿಗೆ ಇಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**